*ಸಾಕ್ಷಿಯನ್ನು ದಿಃ 29-11-2018ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.*

ಮುಂದುವರೆದ *ಪಾಟೀ ಸವಾಲುಃಃ ಶ್ರೀ* ಡಿ ಎಸ್ *2* ನೇ ಎದುರುದಾರರ *ಪರ ವಕೀಲರಿಂದಃಃ*

.ಸಿ ವಿ ಮೂರ್ತಿ ಅಂಡ್ ಗ್ರೂಫ್ ನವರಿಗೆ ಮಾರಾಟ ಮಾಡುವ ಪೂರ್ವದಲ್ಲಿ ಲೀಲಾವಿಹಾರಿನಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಲೀಲಾ ವಿಹಾರಿನ ಒಂದು ಭಾಗವನ್ನು ಸಿ ವಿ ಮೂರ್ತಿ ಅಂಡ್ ಗ್ರೂಫ್ ನವರಿಗೆ ಮಾರಾಟ ಮಾಡಿದ್ದಾರೆ. ಸಾಕ್ಷಿ ಮುಂದುವರೆದು ನಾನು ಚಿಕ್ಕವನಾಗಿದ್ದಾಗ ಆ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ಹೇತ್ತಾರೆ. ಅದೇ ರೀತಿ ಲೀಲಾವಿಹಾರಿನ ಇನ್ನೊಂದು ಭಾಗವನ್ನು ಕಾಮಾಕ್ಷಿದೇವಿ ಎಂಬುವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆಯವರೇ ಸದರಿ ಕಾಮಾಕ್ಷಿದೇವಿಯವರಿಗೆ ಮಾರಾಟ ಮಾಡಿದ್ದಾರೆ. ಆ ಕ್ರಯಪತ್ರಕ್ಕೆ ನಾನು ಕೂಡ ಸಹಿ ಮಾಡಿರುತ್ತೇನೆ. ಆ ಕ್ರಯಪತ್ರಕ್ಕೆ 2 ನೇ ಎದುರುದಾರಳಾದ ದೀಪಾ ಮಾಲಿನಿಯವರು ಸಹಿ ಮಾಡಿಲ್ಲ ಎಂದರೆ ಸರಿ. 2 ನೇ ಎದುರುದಾರಳಿಗೂ ಲೀಲಾವಿಹಾರಿನಲ್ಲಿ ಭಾಗಾ ಇದೆಯೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆ ತೀರಿಕೊಂಡ ನಂತರ ಅವರಿಗೂ ಭಾಗ ಇದೆ ಎಂದು ಹೇಳುತ್ತಾರೆ. ಕಾಮಾಕ್ಷಿ ದೇವಿಯವರಿಗೆ ಬರೆದುಕೊಟ್ಟಿರುವ ಕ್ರಯಪತ್ರಕ್ಕೆ ನಾನು ಸಹಿ ಹಾಕುವಾಗ ನನಗೆ ಅದರಲ್ಲಿ ಭಾಗ ಇರಲಿಲ್ಲ. ಆ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಆ ಕ್ರಯಪತ್ರಕ್ಕೆ ನಾನು ಒಬ್ಬ ಮಾರಾಟಗಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ

ಪದ್ಮ ಜಗದೀಶ್ ಮೆಮೋರಿಯಲ್ ಟ್ರಸ್ಟ್ ಉಃ ಜಾಗ್ ಥೆರಪಿ ಟ್ರಸ್ಟ್ ಗೆ ನಾನು ಹೆಚ್ಚಿನ ಮೊತ್ತವನ್ನು ದಾನ ಮಾಡಿದ್ದೇನೆ ಎಂದರೆ ಸರಿ ಅಲ್ಲ. ದಾನ ಮಾಡಿದವರ ಪಟ್ಟಿಯಲ್ಲಿ ನನ್ನ ಹೆಸರು ಮೊದಲಿಗೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ಹಣ ಕೊಡದೇ ಇದ್ದರೂ ನನ್ನ ಹೆಸರು ಹಾಕಿದ್ದಾರೆ ಎಂದು ಹೇಳುತ್ತಾರೆ. ನನ್ನ ಹೆಸರನ್ನು ಆ ಪಟ್ಟಿಯಲ್ಲಿ ಹಾಕಿದ್ದ ಬಗ್ಗೆ ನಾನು ಯಾವುದೇ ತಕರಾರು ಮಾಡಿಲ್ಲ. ನನ್ನ ಹಾಗೂ ಅಜಿತ್ ಅರಸ್ ರವರ ನಡುವೆ ಹಣಕಾಸಿನ ವ್ಯವಹಾರ ಇದೆ ಎಂದರೆ ಸರಿ ಅಲ್ಲ. ಸದರಿ ಅಜಿತ್ ರವರು ಪದ್ಮ ಜಗದೀಶ್ ಮೆಮೋರಿಯಲ್ ಟ್ರಸ್ಟ್ ಗೆ ಯಾವ ರೀತಿ ಸಂಬಂಧ ಹೊಂದಿದ್ದಾರೆ ಎಂದು ಗೊತ್ತಿಲ್ಲ. ಸದರಿ ಅಜಿತ್ ವೃತ್ತಿಯಲ್ಲಿ ವೈದ್ಯರಾಗಿದ್ದು, ಅವರ ತಮ್ಮ ಮಾವನವರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ಟ್ರಸ್ಟ್ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಬಿ ಎಂ ಆಸ್ಪತ್ರೆಯ ಕೊಠಡಿ ನಂ.202 ರಲ್ಲಿ ನನ್ನ ತಂದೆಯನ್ನು ದಾಖಲಿಸಿದ್ದರು ಎಂದರೆ ಸರಿ. ವಿಲ್ ಮಾಡುವ ಸಂದರ್ಭದಲ್ಲಿ ಆಸ್ಪತ್ರೆ ಅಧಿಕಾರಿಗಳ ಪರವಾನಿಗೆ ಪಡೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ವಿಲ್ ನನ್ನ ವಶಕ್ಕೆ ಬಂದ ನಂತರ ಅದನ್ನು ಓದಿದಾಗ ಆಸ್ಪತ್ರೆಯಲ್ಲಿ ಬರೆಯಲಾಗಿದೆ ಎಂದು ಗೊತ್ತಾಗಿದೆ. ದಿಃ 2.9.2011 ರಂದು ಮೊದಲನೇ ಬಾರಿಗೆ ವಿಲ್ ನ್ನು ನಮ್ಮ ಚಿಕ್ಕಮ್ಮನವರಾದ ಕಾಮಾಕ್ಷಿದೇವಿರವರು ನನಗೆ ಓದಿ ಹೇಳಿದ್ದಾರೆ. ಆ ವಿಲ್‌ನ ಸಂಗತಿಗಳನ್ನು ನಾನು ತಿಳಿದುಕೊಂಡಿದ್ದೇನೆ. ಸದರಿ ವಿಲ್ ನಲ್ಲಿ ಬರಹಗಾರರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ವಿಲ್ ನ್ನು ಬಿ ಎಂ ಆಸ್ಪತ್ರೆಯ ಕೊಠಡಿ ನಂ,202 ರಲ್ಲಿ ಬರೆಯಲಾಗಿದೆ ಎಂದು ವಿಲ್ ನಲ್ಲಿ ನಮೂದಿಸಿದ್ದಾರೆ ಎಂದರೆ ಸರಿ. ವಿಲ್ ನ್ನು ಬರೆಯುವ ಸಮಯದಲ್ಲಿ ನಮ್ಮ ತಂದೆಯವರ ಮಾನಸಿಕ ಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿ ಅಲ್ಲ. ಅವರು ನೋವಿನಿಂದ ಬಲಳುತ್ತಿದ್ದರಿಂದ ವಿಲ್ ನ್ನು ಬರೆಯುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿ ಅಲ್ಲ. ನಮ್ಮ ತಂದೆ ಕ್ಯಾನ್ಸರ್ ನಿಂದ ಬಲಳುತ್ತಿದ್ದರು ಎಂದರೆ ಸರಿ. ವಿಲ್ ಬರೆದ ನಂತರ ನನ್ನ ತಂದೆ ಆಸ್ಪತ್ರೆಯಿಂದ ಬಿಡುಗಡೆಗೊಳ್ಳದೇ ಆಸ್ಪತ್ರೆಯಲ್ಲಿ ತೀರಿಕೊಂಡರು ಎಂದರೆ ಸರಿ. ನಮ್ಮ ತಂದೆಯವರಾದ ಕೆ ಬಿ ರಾಮಂದ್ರ ರಾಜ್ ಅರಸ್ ರವರ ಎಲ್ಲಾ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬದವರು ನಮ್ಮ ತಂದೆಯ ಉತ್ತರಕ್ರಿಯಾದಿಗೆ ಹಾಜರಿದ್ದರು ಎಂದರೆ ಸರಿ. ನಮ್ಮ ತಂದೆಗೂ 2 ನೇ ಎದುರುದಾರರಿಗೂ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸರಿ ಅಲ್ಲ.

ಬನ್ನೂರು ರಸ್ತೆಯಲ್ಲಿ ನಮ್ಮ ತಾಯಿಯ ಹೆಸರಿನಲ್ಲಿ ಆಸ್ತಿ ಇದೆ ಎಂದರೆ ಸರಿ ಅಲ್ಲ. ಬನ್ನೂರು ರಸ್ತೆಯಲ್ಲಿರುವ ಆಸ್ತಿಯನ್ನು ಮಾರಾಟ ಮಾಡುವ ವಿಚಾರವಾಗಿ ನಾನು ಒಬ್ಬ ಮಾರ್ವಾಡಿಯಿಂದ ಯಾವುದೇ ಹಣವನ್ನು ಪಡೆದುಕೊಂಡಿಲ್ಲ. ಆ ವ್ಯವಹಾರದ ವಿಚಾರವಾಗಿ ನಾನೊಬ್ಬನೇ ಆ ಮಾರ್ವಾಡಿಯಿಂದ ಒಟ್ಟು ರೂ.80 ಲಕ್ಷ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿ ಅಲ್ಲ.

ನನ್ನ ಮನೆಯ ಮುಂಭಾಗದಲ್ಲಿ ರಾಮಾಂಜನೇಯ ಸ್ವಾಮಿ ದೇವಸ್ಥಾನ ಇದೆ ಎಂದರೆ ಸರಿ. ಆ ದೇವಸ್ಥಾನ ಈಗಲೂ ಅಸ್ತಿತ್ವದಲ್ಲಿದೆ. ಈಗ ಆ ದೇವಸ್ಥಾನದ ಪೂಜಾರಿಯ ಹೆಸರು ಗೊತ್ತಿಲ್ಲ. ಆ ದೇವಸ್ಥಾನಕ್ಕೆ ಪೂಜಾರಿಯನ್ನು ನಾನೇ ನೇಮಿಸುತ್ತೇನೆ. ಆ ದೇವಸ್ಥಾನದ ಜಾಗದಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗಿದೆ ಎಂದರೆ ಸರಿ. ಆ ಕಟ್ಟಡವನ್ನು ಕಾಂತರಾಜ್ ಅರಸ್ ರವರು ಕಟ್ಟಿಸಿದ್ದಾರೆ ಎಂದರೆ ಸರಿ

ಅಲ್ಲ. ಆ ಕಟ್ಟಡವನ್ನು ಕಟ್ಟಲು ಜಯರಾಜ್ ಅರಸ್ ರವರೊಂದಿಗೆ ಜಂಟಿ ಅಭಿವೃದ್ಧಿ ಕರಾರು ಆಗಿತ್ತು. ಆ ಆಸ್ತಿಯಲ್ಲಿ 2 ನೇ ಎದುರುದಾರರಿಗೂ ಸಹ ಭಾಗ ಇದೆ ಎಂದರೆ ಸರಿ. 2 ನೇ ಎದುರುದಾರರು ಆ ಆಸ್ತಿಗೂ ಯಾವಾಗ ಬೇಕಾದರೂ ಭೇಟಿ ನೀಡಬಹುದು. ನನ ಮತ್ತು ಸದರಿ ಜಯರಾಜ್ ಅರಸ್‌ರವರ ನಡುವಿನ ಸಂಬಂಧ ಚೆನ್ನಾಗಿದೆ. ನನ್ನ ಚಿತಾವನೆಯಿಂದ ಸದರಿ ಜಯರಾಜ್ ಅರಸ್‌ರವರು 2 ನೇ ಎದುರುದಾರರ ಗಂಡನ ವಿರುದ್ಧ ಅತಿಕ್ರಮಣ ಮಾಡಿದ್ದಾರೆ ಎಂದು ಕ್ರಿಮಿನಲ್ ಪ್ರಕರಣ ಹೂಡಿದ್ದಾರೆ ಎಂದರೆ ಸರಿ ಅಲ್ಲ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ 2 ನೇ ಎದುರುದಾರರು ಮತ್ತು ಅವರ ಗಂಡನ ವಿರುದ್ಧ ಅತಿಕ್ರಮಣ ಮಾಡಿದ್ದಾರೆ ಎಂದು ದೂರು ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ಕಚೇರಿಯ ಬಾಗಿಲನ್ನು ಒಡೆಯಲು ಬಂದಾಗ ಸದರಿ ದೂರು ನೀಡಿದ್ದೇನೆ.

ನಮ್ಮ ತಂದೆಯು ಬರೆದುಕೊಟ್ಟಿರುವ ವಿಲ್ ನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲು ನನ್ನದ್ದು ಯಾವುದೇ ತಕರಾರು ಇಲ್ಲ. ನಿಆರ್-5 ವಿಲ್ ನಲ್ಲಿರುವ ನಮ್ಮ ತಂದೆಯ ಫೋಟೋ ಮೇಲೆ ಅವರ ಸಹಿ ಇಲ್ಲ ಎಂದರೆ ಸರಿ. ವಿಲ್ ನಲ್ಲಿ ನಮೂದಿಸಿರುವ ಚಿನ್ನದ ಆಭರಣಗಳಿಗೆ ಸಂಬಂಧಿಸಿದಂತೆ ಭಾಗವನ್ನು ಕಾಮಾಕ್ಷಿ ದೇವಿರವರು ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಯ ನಿರ್ದೇಶನದ ಮೇರೆಗೆ ಕಾಮಾಕ್ಷಿ ದೇವಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಚಿನ್ನದ ಆಭರಣಗಳನ್ನು ನಾಲ್ಕು ಭಾಗಗಳನ್ನು ಮಾಡಿದ್ದಾರೆ ಎಂದರೆ ಸರಿ. ಭಾಗ ಮಾಡುವ ಸಂದರ್ಭದಲ್ಲಿ ನಾನು ಹಾಜರಿರಲಿಲ್ಲ. ಆ ನಾಲ್ಕು ಭಾಗಗಳಲ್ಲಿ 2 ನೇ ಎದುರುದಾರಳಿಗೆ ತನಗೆ ಬೇಕಾದ ಭಾಗವನ್ನು ಆಯ್ದುಕೊಳ್ಳಲು ಅವಕಾಶ ಕೊಟ್ಟಿರಲಿಲ್ಲ ಎಂದರೆ ಸರಿ ಅಲ್ಲ. ಮೊಟ್ಟಮೊದಲ ಬಾರಿಗೆ ವಿಲ್ ನ್ನು ಓದುವ ಸಂದರ್ಭದಲ್ಲಿ ನಾನು, 1 ರಿಂದ 3 ನೇ ಪ್ರತಿವಾದಿಗಳು ಮತ್ತು ಅವರ ಗಂಡಂದಿರು, ನನ್ನ ಮಾವ ಶ್ರೀಕಂಠದತ್ತ ಒಡೆಯರು ಮತ್ತು ಅವರ ಪತ್ನಿ ಪ್ರಮೋದಾ ದೇವಿ ಹಾಗೂ ಕಾಮಾಕ್ಷಿ ದೇವಿ ಹಾಜರಿದ್ದೆವು. ಕಾಮಾಕ್ಷಿ ದೇವಿಗೆ ನ್ಯಾಯಾಲಯದಲ್ಲಿ ಸಾಕ್ಷಿ ಕೊಡಲು ಯಾವುದೇ ತೊಂದರೆ ಇಲ್ಲ. ಅದೇ ರೀತಿ ಶ್ರೀಮತಿ ಪ್ರಮೋದಾ ದೇವಿಯವರಿಗೆ ವಿಲ್‌ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಸಾಕ್ಷ್ಯ ಕೊಡಲು ತೊಂದರೆ ಇದೆಯಾ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ತಂದೆಯು ಮೃತಪಡುವ ಪೂರ್ವದಲ್ಲಿ 2 ನೇ ಎದುರುದಾರರನ್ನು ಮನೆಯಿಂದ ಹೊರಗಡೆ ಹೋಗಲು ನಾನೇ ಸೂಚಿಸಿದ್ದೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು 2 ನೇ ಎದುರುದಾರಳ ಗಂಡನ ಕಾರಣದಿಂದ ಮನೆಯಿಂದ ಹೊರಗಡೆ ಹೋಗಿರುತ್ತಾರೆ ಎಂದು ಹೇಳುತ್ತಾರೆ. ಅಂದಿನಿಂದ 2 ನೇ ಎದುರುದಾರರು ನಮ್ಮ ತಂದೆ ಮೃತಪಟ್ಟಾಗ ಹೊರುತುಪಡಿಸಿ ಯಾವತ್ತೂ ಲೀಲಾ ವಿಹಾರ ಮನೆಗೆ ಬಂದಿಲ್ಲ. ನಮ್ಮ ತಂದೆಗೆ ಸಂಬಂಧಿಸಿದಂತೆ ಎಲ್ಲಾ ವೈದ್ಯಕೀಯ ದಾಖಲೆಗಳು ನನ್ನ ಹತ್ತಿರ ಇರಬಹುದು. ಆ ದಾಖಲೆ ನನ್ನ ಬಳಿ ಇದ್ದರೆ ಅವುಗಳನ್ನು ಹಾಜರುಪಡಿಸುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

*ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ*
*ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೇ ಸ ಇದೆ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ.,*
*ಮೈಸೂರು.*